| ರಾಜ್ಯದ 6,995 ಕ್ಷೇಮ ಕೇಂದ್ರಗಳ ಆರೋಗ್ಯ ಸಾಧನೆ (ಫೆಬ್ರುವರಿ 2022ರವರೆಗೆ) | |
|---|---|
| ಆರೋಗ್ಯ ಮತ್ತು ಕ್ಷೇಮ ಕೇಂದ್ರ ಭೇಟಿ ನೀಡಿದ ಒಟ್ಟು ರೋಗಿಗಳು | 6,04,69,105 |
| ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಔಷಧ ಪಡೆದ ಒಟ್ಟು ಮಂದಿ | 5,46,72,478 |
| ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ವೈದ್ಯರ ಸಲಹೆ ಪಡೆದವರು | 1,96,52,791 |
| ಕ್ಷೇಮ ಕೇಂದ್ರದಲ್ಲಿ ಯೋಗ, ಇತರೆ ಒಟ್ಟು ಅಭ್ಯಾಸ ಕಾರ್ಯಕ್ರಮ | 9,26,343 |
| ಒತ್ತಡ (ಹೃದಯ) ಸಂಬಂಧ ಪರೀಕ್ಷೆಗೆ ಒಳಪಟ್ಟವರು | 94,08,389 |
| ಒತ್ತಡ (ಹೃದಯ) ಚಿಕಿತ್ಸೆ ಪಡೆದವರು | 11,66,080 |
| ಕ್ಷಯ ರೋಗ ಸಂಬಂಧ ಪರೀಕ್ಷೆಗೆ ಒಳಪಟ್ಟವರು | 81,08,723 |
| ಕ್ಷಯ ರೋಗಕ್ಕೆ ಚಿಕಿತ್ಸೆ ಪಡೆದವರು | 10,19,767 |
| ಬಾಯಿ ಕ್ಯಾನ್ಸರ್ ಪರೀಕ್ಷೆ | 33,68,844 |
| ಸ್ತನ ಕ್ಯಾನ್ಸರ್ ಪರೀಕ್ಷೆ | 11,88,630 |
| ಸ್ತನಕ್ಯಾನ್ಸರ್‌ಗೆ ಚಿಕಿತ್ಸೆ ಪಡೆದವರು | 9,553 |
| ಇತರೆ ಕ್ಯಾನ್ಸರ್ ಸಂಬಂಧ ಪರೀಕ್ಷೆಗೆ ಒಳಪಟ್ಟವರು | 9,58,958 |
| ಇತರೆ ಕ್ಯಾನ್ಸರ್ ಸಂಬಂಧ ಚಿಕಿತ್ಸೆ ಪಡೆದವರು | 791 |

- ಕುಟುಂಬ ಕಲ್ಯಾಣ ಯೋಜನೆಗಳ ಅನುಷ್ಠಾನ.
- ಎಲ್ಲ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ.
- ಸಾಂಕ್ರಾಮಿಕ ರೋಗಗಳ ನಿರ್ವಹಣೆ.
- ಅಸಾಂಕ್ರಾಮಿಕ ರೋಗಗಳ ನಿರ್ವಹಣೆ
- ಹಿರಿಯ ನಾಗರಿಕರ ಹಾಗೂ ಅಂತಿಮ ಹಂತದ ಆರೋಗ್ಯ ಪಾಲನೆ.
- ಕಣ್ಣಿನ ಆರೋಗ್ಯ ಸೇವೆಯ ಅನುಷ್ಠಾನ.
- ದಂತ ಆರೋಗ್ಯ ಸೇವೆಗಳ ಅನುಷ್ಠಾನ.
- ತುರ್ತು ವೈದ್ಯಕೀಯ ಸೇವೆಗಳನ್ನು ನೀಡುವುದು.
- ಮಾನಸಿಕ ಆರೋಗ್ಯ ಸೇವೆಗಳು

## ಗುಣಮಟ್ಟದ ಆರೋಗ್ಯ ಸೇವೆ

ಅನಾರೋಗ್ಯ ಸಮಸ್ಯೆಗಳು ಇರುವವರಿಗೆ ಗುಣಮಟ್ಟದ ಆರೋಗ್ಯ ರಕ್ಷಣಾ ಸೇವೆಗಳನ್ನು ಒದಗಿಸುವುದು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಪ್ರಮುಖ ಆದ್ಯತೆ. ಜನರ ಆರೋಗ್ಯ ಅಗತ್ಯಗಳಿಗೆ ತಕ್ಕಂತೆ ಸಮಾಧಾನಕರವಾಗಿ ಕಾರ್ಯನಿರ್ವಹಿಸುವ ಜತೆಗೆ ರೋಗ ಬರುವ ಮುನ್ನ ವ್ಯಕ್ತಿ ಅಗತ್ಯ ಆರೋಗ್ಯ ರಕ್ಷಣೆ ಪಡೆಯಬೇಕು ಎಂಬುದು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಧ್ಯೇಯವಾಗಿದೆ. ಇದನ್ನೇ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಸಾಮಾಜಿಕ ರಕ್ಷಣೆಯ ಮುಖ್ಯ ರೂಪವಾಗಿದ್ದು, ಕೈಗೆಟುಕುವ ದರದಲ್ಲಿ ಗುಣಮಟ್ಟದ ಆರೋಗ್ಯ ರಕ್ಷಣೆ ಕಲ್ಪಿಸಬೇಕು ಎಂದು ಹೇಳಲಾಗಿದೆ .

- ಆರೋಗ್ಯ ಸೇವೆಗಳಿಂದ ಜನರ ಜೇಬಿನ ವೆಚ್ಚ ಕಡಿಮೆಯಾಗಬೇಕು (ಆರ್ಥಿಕ ಹೊರೆ).
- ಜನರು ರೋಗ ಬಂದಾಗ ಸೇವೆ ಪಡೆಯುವ ಬದಲು ರೋಗಕ್ಕೆ ಮುನ್ನವೇ ಅಗತ್ಯ ಮುಂಜಾಗ್ರತೆ ವಹಿಸುವಂತೆ ಮಾಡುವುದು.
- ಅಸಾಂಕ್ರಾಮಿಕ ಇತರ ರೋಗಗಳನ್ನು ಗುರುತಿಸಿ, ಚಿಕಿತ್ಸೆ ನೀಡುವ ಮೂಲಕ ಮರಣ ಪ್ರಮಾಣವನ್ನು ತಗ್ಗಿಸುವುದು.
- ಆರೋಗ್ಯ ಸೇವೆಗಳ ಮೂಲಕ ಬಡತನ ನಿರ್ಮೂಲನಾ ಗುರಿಗೆ ನೆರವಾಗುವುದು.
- ಮನೆ ಬಾಗಿಲಿಗೆ ಆರೋಗ್ಯ ಸೇವೆಗಳನ್ನು ಒದಗಿಸುವ ವ್ಯವಸ್ಥೆ ಮಾಡುವುದು.

## ಆರೋಗ್ಯ ಸೇವೆಗಳ ವಿಸ್ತರಣೆ

ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ 12 ಮಾದರಿಯ ಸೇವೆಗಳಿದ್ದು, ಅವುಗಳನ್ನು ಪ್ರಸ್ತುತ ಉಪ ಕೇಂದ್ರಗಳಿಗೂ ವಿಸ್ತರಿಸಲಾಗಿದೆ. ಮೊದಲ ಹಂತದಲ್ಲಿ ಸಾಂಕ್ರಾಮಿಕ ಮತ್ತು ಇತರ ರೋಗಗಳ ತಪಾಸಣೆ, ಅಗತ್ಯ ಕ್ರಮ ಮತ್ತು ನಿರ್ವಹಣೆ ಹಾಗೂ ದೀರ್ಘಕಾಲೀನ ಅಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿರುವವರ ಆರೈಕೆ ಕುರಿತು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಸೇವೆಗಳನ್ನು ಪರಿಚಯಿಸಲಾಯಿತು.

ಗರ್ಭಿಣಿಯರಿಗೆ ಹೆರಿಗೆ ಸಮಯದ ಕಾಳಜಿ, ನವಜಾತ ಶಿಶುಗಳ ಆರೈಕೆ ಮತ್ತು ರಕ್ಷಣಾ ಸೇವೆಗಳು, ಬಾಲ್ಯ ಮತ್ತು ಹದಿಹರೆಯದವರ ಆರೋಗ್ಯ ಸೇವೆಗಳು, ಕುಟುಂಬ ಯೋಜನೆ, ಗರ್ಭನಿರೋಧಕ ಸೇವೆಗಳು ಮತ್ತು ಸಂತಾನ ರಕ್ಷಣಾ ಸೇವೆಗಳು, ಅಸಾಂಕ್ರಾಮಿಕ ರೋಗಗಳ ನಿರ್ವಹಣೆ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು, ಸಾಮಾನ್ಯ ಸಾಂಕ್ರಾಮಿಕ ರೋಗಿಗಳ ನಿರ್ವಹಣೆ ಮತ್ತು ಸರಳ ಅಥವಾ ಸಣ್ಣ ಕಾಯಿಲೆಗಳ ಸಾಮಾನ್ಯ ಹೊರರೋಗಿಗಳ ಆರೈಕೆ, ಕ್ಯಾನ್ಸರ್, ಟಿ.ಬಿ, ಕುಷ್ಠದಂತಹ ದೀರ್ಘ ಕಾಲದ ರೋಗಗಳ ತಪಾಸಣೆ, ನಿಯಂತ್ರಣಾ ಕ್ರಮಗಳು ಆರೋಗ್ಯ ರಕ್ಷಣಾ ಪ್ಯಾಕೇಜ್ ಒಳಗೊಂಡಿವೆ.

ಇದರ ಜತೆಗೆ ಎಚ್‌ಡಬ್ಲ್ಯುಸಿ ಉಪ ಕೇಂದ್ರಗಳ ಹಂತದವರೆಗೆ ಬಾಯಿ ಮತ್ತು ಗಂಟಲಿನ ಆರೋಗ್ಯ ರಕ್ಷಣೆ, ಕಣ್ಣು ಹಾಗೂ ಇಎನ್‌ಟಿ ಸಮಸ್ಯೆಗಳ ಆರೈಕೆ, ವೃದ್ಧರು ಮತ್ತು ರೋಗಿಗಳಿಗೆ ಉಪಶಮನ ಸೇವೆಗಳನ್ನು ವಿಸ್ತರಿಸಲಾಗಿದೆ. ತುರ್ತು ವೈದ್ಯಕೀಯ ಸೇವೆಗಳು, ಮಾನಸಿಕ ಕಾಯಿಲೆಗಳ ಮೊದಲ ಹಂತದ ನಿರ್ವಹಣೆ ಸೇರಿದಂತೆ ಅಗತ್ಯ ಸೇವೆಗಳನ್ನು ಉಪ ಕೇಂದ್ರಗಳಲ್ಲಿ ಒದಗಿಸಲಾಗುತ್ತಿದೆ. ಈ ಎಲ್ಲ ಆರೋಗ್ಯ ಪ್ಯಾಕೇಜ್‌ಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪ ಕೇಂದ್ರಗಳ ಸ್ತರದಲ್ಲಿ ಎಲ್ಲ ಸಾಮಾನ್ಯ ವರ್ಗಕ್ಕೂ ಸುಲಭವಾಗಿ ಸಿಗುವಂತೆ ಮಾಡಲಾಗಿದೆ. ಸಮುದಾಯ ಆರೋಗ್ಯಾಧಿಕಾರಿಗಳು ಈ ಸೇವೆಗಳನ್ನು ಎಲ್ಲ ಸಮುದಾಯಗಳಿಗೆ ತಲುಪಿಸುತ್ತಾರೆ.

## ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆ

ಆಯುಷ್ಮಾನ್ ಭಾರತ ಯೋಜನೆಯ ಕ್ಷೇಮ ಕೇಂದ್ರಗಳು ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆಯ (ಸಿಪಿಎಚ್‌ಸಿ) ಸಂಕೀರ್ಣ ವ್ಯವಸ್ಥೆಯನ್ನು ಹೊಂದಿವೆ. ಎಲ್ಲ ಹಂತದ ಆರೋಗ್ಯ ವ್ಯವಸ್ಥೆಗಳಲ್ಲಿ ಮಾದರಿ ಬದಲಾವಣೆ ಅಗತ್ಯವಾಗಿ ಇರುತ್ತದೆ. ಕ್ಷೇಮ ಕೇಂದ್ರಗಳ ಕಾರ್ಯಾಚರಣೆಯಲ್ಲಿಯೂ ವೈವಿಧ್ಯತೆ ಕಾಣಬಹುದಾಗಿದೆ.ಸಮುದಾಯಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದರಿಂದ ಹಿಡಿದು, ರೋಗ ನಿರ್ಣಯ ಮಾಡುವ ವ್ಯವಸ್ಥೆ ಇಲ್ಲಿದೆ. ಅಷ್ಟೇ ಅಲ್ಲ, ರೋಗಿಗಳಿಗೆ ಔಷಧ ಒದಗಿಸಲಾಗುತ್ತದೆ. ಮಾರಕ ಕಾಯಿಲೆಗಳನ್ನು ಹೊಂದಿರುವ ರೋಗಿಗಳಿಗೆ ತಜ್ಞ ವೈದ್ಯರೊಂದಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಆರೋಗ್ಯ ಮತ್ತು ಕ್ಷೇಮ